**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

# ಸಾಂಸ್ಕೃತಿಕ ಕನ್ನಡ

**ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಸ್ನಾತಕ ಪದವಿಯ ಪ್ರಥಮ ವರ್ಷದ**

## ಪಠ್ಯಾಧಾರಿತ ಪ್ರಾಯೋಗಿಕ ಅಭ್ಯಾಸ ಪುಸ್ತಕ

**ಸಿದ್ಧಪಡಿಸಿದವರು**

**ಡಾ. ಜೆ.ಬಾಲಕೃಷ್ಣ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಜಿ. ವೀರಭದ್ರಗೌಡ**
ಸಹಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು

**ಶ್ರೀ ಕೆ. ಪುರುಷೋತ್ತಮ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು

**ಪ್ರೊ. ಎಂ. ನಾರಾಯಣ ಸ್ವಾಮಿ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪಶು ಶರೀರಕ್ರಿಯಾ ವಿಜ್ಞಾನ ವಿಭಾಗ, ಪಶುವೈದ್ಯಕೀಯ ಕಾಲೇಜು
ಕಪಪಮೀವಿವಿ, ಹೆಬ್ಬಾಳ, ಬೆಂಗಳೂರು

**ವಿದ್ಯಾರ್ಥಿ ವಿವರಗಳು**

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ ಗುರುತಿನ ಸಂಖ್ಯೆ : ______________________

ಮೊಬೈಲ್ ಸಂಖ್ಯೆ : ______________________

ಸಂಪರ್ಕ ವಿಳಾಸ

______________________

______________________

______________________

## ಪರಿವಿಡಿ


| ಕ್ರ. ಸಂ. | ಅಧ್ಯಾಯ | ಪುಟ ಸಂಖ್ಯೆ |
|---|---|---|
| 1. | ಕರ್ನಾಟಕದ ಸಂಸ್ಕೃತಿ – ಹಂಪ ನಾಗರಾಜಯ್ಯ | |
| 2. | ಕರ್ನಾಟಕದ ಏಕೀಕರಣ : ಒಂದು ಅಪೂರ್ವ ಚರಿತ್ರೆ – ಜಿ. ವೆಂಕಟಸುಬ್ಬಯ್ಯ | |
| 3. | ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ – ಅಶೋಕಕುಮಾರ ರಂಜೇರೆ | |
| 4. | ವಚನಗಳು : ಬಸವಣ್ಣ, ದೇಶೀಕೇಂದ್ರ ಸಂಗನಬಸವಯ್ಯ, ಒಕ್ಕಲಿಗ ಮುದ್ದಣ್ಣ, ಅಕ್ಕಮಹಾದೇವಿ, ನುಲಿಯ ಚಂದಯ್ಯ. | |
| 5. | ಕೀರ್ತನೆಗಳು : ಉದರ ವೈರಾಗ್ಯವಿದು – ಪುರಂದರದಾಸರು | |
| | ಕುಲಕುಲವೆಂದು ಹೊಡೆದಾಡದಿರಿ – ಕನಕದಾಸರು | |
| 6. | ತತ್ವಪದ : ಸುಗ್ಗಿ ಮಾಡೋಣು ಬಾರವ್ವಾ – ಶಿಶುನಾಳ ಶರೀಫ | |
| 7. | ಜನಪದ ಗೀತೆ | |
| 8. | ಆಧುನಿಕ ಕಾವ್ಯ : ಮಂಕುತಿಮ್ಮನ ಕಗ್ಗ – ಡಿವಿಜಿ | |
| | ಪುಟ್ಟ ವಿಧವೆ – ದ. ರಾ. ಬೇಂದ್ರೆ | |
| | ರೈತನ ದೃಷ್ಟಿ – ಕುವೆಂಪು | |
| | ಅನ್ನದ ಋಣ – ಚನ್ನವೀರ ಕಣವಿ | |
| | ಕನ್ನಡವೆಂದರೆ ಬರಿ ನುಡಿಯಲ್ಲ – ಕೆ. ಎಸ್. ನಿಸಾರ್ ಅಹಮದ್ | |
| | ಬಿಸಿಲುಗುದುರೆಯನೇರಿ ಹೋದಾ – ಚಂದ್ರಶೇಖರ ಕಂಬಾರ | |
| | ನನ್ನ ಕವನ – ಸಿದ್ದಲಿಂಗಯ್ಯ | |
| 9. | ಕಥೆಗಳು : ಹಬ್ಬ ಮತ್ತು ಬಲಿ – ಬಿ. ಟಿ. ಲಲಿತಾ ನಾಯಕ್ | |
| | ಜನಪದ ಕಥೆ : ಚಿನ್ನ ಮತ್ತು ಮರ – ಹಿ. ಚಿ. ಬೋರಲಿಂಗಯ್ಯ | |

# ಕನ್ನಡ ನಾಡು, ನುಡಿ, ಭಾಷೆ

## 1. ಕರ್ನಾಟಕದ ಸಂಸ್ಕೃತಿ – ಹಂಪ ನಾಗರಾಜಯ್ಯ

**ಅ. ಈ ಕನ್ನಡ ಕಾವ್ಯಗಳ ಕರ್ತೃಗಳ ಹೆಸರನ್ನು ಓದಿ ತಿಳಿಯಿರಿ.**

| | |
|---|---|
| ಕಬ್ಬಿಗರ ಕಾವ | : ಆಂಡಯ್ಯ |
| ಜೈಮಿನಿ ಭಾರತ | : ಲಕ್ಷ್ಮೀಶ |
| ರಾಜಶೇಖರ ವಿಳಾಸ | : ಮುಪ್ಪಿನ ಷಡಕ್ಷರಯ್ಯ |
| ಗದುಗಿನ ಭಾರತ | : ಗದುಗಿನ ನಾರಾಯಣಪ್ಪ/ಕುಮಾರವ್ಯಾಸ |
| ಪ್ರಭುಲಿಂಗಲೀಲೆ | : ಚಾಮರಸ |

**ಆ. ಪಠ್ಯವನ್ನು ಆಧರಿಸಿ ಈ ಮುಂದಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ:**

1. ಆಂಡಯ್ಯ ಕವಿಯು ಕನ್ನಡ ನಾಡನ್ನು ವರ್ಣಿಸಿರುವ ಪದ್ಯಭಾಗದ ಅರ್ಥವನ್ನು ಪಠ್ಯದಲ್ಲಿ ಕೊಟ್ಟಿರುವಂತೆ ಬರೆಯಿರಿ.

2. ಸನಾತನ ಧರ್ಮವನ್ನು ಪ್ರತಿಭಟಿಸಿ ಬಂದ ಧರ್ಮಗಳನ್ನು ಹೆಸರಿಸಿ.

3. ಭಾರತಕ್ಕೆ ಹೊರಗಿನಿಂದ ಪ್ರವೇಶ ಪಡೆದ ಧರ್ಮಗಳನ್ನು ಹೆಸರಿಸಿ.

4. ತುರುಗೋಳು, ಊರಳಿವು, ಪೆಣ್ಬುಯ್ಯಲ್‌ಗಳೆಂದರೇನು?

5. ವೇಳವಡಿಚರೆಂದು ಯಾರನ್ನು ಕರೆಯುತ್ತಾರೆ?

6. ಮಾಸ್ತಿಯರೆಂದು ಪ್ರಸಿದ್ಧರಾದವರು ಯಾರು?

## 2. ಕರ್ನಾಟಕದ ಏಕೀಕರಣ : ಒಂದು ಅಪೂರ್ವ ಚರಿತ್ರೆ – ಜಿ. ವೆಂಕಟಸುಬ್ಬಯ್ಯ

**ಅ. ಮುಂದೆ ಸೂಚಿಸಿರುವ ರಾಜಮನೆತನದ ರಾಜಧಾನಿ ಹಾಗೂ ಸಂಸ್ಥಾಪಕ ರಾಜರ ಹೆಸರುಗಳನ್ನು ಓದಿ ತಿಳಿಯಿರಿ.**

| | | |
|---|---|---|
| ಕದಂಬರು | ಮಯೂರವರ್ಮ | ಬನವಾಸಿ (ತರುವಾಯದಲ್ಲಿ ಹಂಚಿಕೆಯಾಗಿ ಬನವಾಸಿಯಾಗಿ ಹಾನಗಲ್ಲ, ಗೋವಾ ರಾಜಧಾನಿಯಾಗಿದ್ದವು). |
| ಗಂಗರು | ದಡಿಗ / ಕೊಂಗುಣೀವರ್ಮ | ಮೊದಲು ಕುವಲಾಳ (ಇಂದಿನ ಕೋಲಾರ) ನಂತರ ಶೀಪುರುಷನ ಆಳ್ವಿಕೆಯ ಕಾಲದಲ್ಲಿ ತಲಕಾಡು ರಾಜಧಾನಿಯಾಗಿತ್ತು. |
| ಚಾಲುಕ್ಯರು | ಒಂದನೆಯ ಪುಲಕೇಶಿ | ವಾತಾಪಿ ಇಂದಿನ ಬಾದಾಮಿ. |
| ರಾಷ್ಟ್ರಕೂಟರು | ದಂತಿದುರ್ಗ | ಮಾನ್ಯಖೇಡ |
| ಕಲ್ಯಾಣಿಯ ಚಾಲುಕ್ಯರು | ಎರಡನೆಯ ತೈಲಪ | ಮಾನ್ಯಖೇಟ |
| ಕಲುಚುರ್ಯರು | ಇಮ್ಮಡಿ ಬಿಜ್ಜಳ | ಮಂಗಳವಾಡ. ತರುವಾಯದಲ್ಲಿ ಕಲ್ಯಾಣಿ ಇಂದಿನ ಬಸವಕಲ್ಯಾಣ |
| ಹೊಯ್ಸಳರು | ಎರಡನೆಯ ನೃಪಕಾಮ | ದ್ವಾರಸಮುದ್ರ ಇಂದಿನ ಹಳೆಬೀಡು |
| ವಿಜಯನಗರ ಅರಸರು | ಒಂದನೆಯ ಹರಿಹರ ಮತ್ತು ಎರಡನೆಯ ಬುಕ್ಕರಾಯ | ಆರಂಭದಲ್ಲಿ ಆನೆಗುಂದಿಯಾಗಿತ್ತು. ತರುವಾಯದಲ್ಲಿ ವಿಜಯನಗರ ಇಂದಿನ ಹಂಪಿ. |
| ಮೈಸೂರು ಅರಸರು | ಆದಿ ಯದುರಾಯ ಒಡೆಯರ್ | ಮೈಸೂರು |

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1. ಸರ್ ಥಾಮಸ್ ಮನ್ರೋ ಯಾವ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು?

2. ವಿದ್ಯಾವರ್ಧಕ ಸಂಘವನ್ನು ಎಲ್ಲಿ? ಯಾರು? ಯಾಕೆ ಸ್ಥಾಪಿಸಿದರು?

3. ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಲು ಕಾರಣೀಭೂತವಾದ ಸಮ್ಮೇಳನ ಯಾವುದು?

4. ಕರ್ನಾಟಕ ಏಕೀಕರಣವು ಬಲ ಪಡೆಯಲು ಕಾರಣವಾದ ಸಂಸ್ಥೆಗಳು ಯಾವುವು?

5. ಮೈಸೂರು ಸಂಸ್ಥಾನದ ಕನ್ನಡ ಪರಿಸರವು ಕರ್ನಾಟಕಕ್ಕೆ ಸೇರಲು ಕಾರಣರಾದವರು ಯಾರು?

6. 1955ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದವರು ಯಾರು?

7. ಕರ್ನಾಟಕ ಏಕೀಕರಣವು ಎಷ್ಟು ವರ್ಷಗಳ ಆಂದೋಲನದ ಫಲ?

8. ಬಸವಕಲ್ಯಾಣವನ್ನು ಕರ್ನಾಟಕಕ್ಕೆ ಸೇರಿಸಲು ಸಭೆ ಸೇರಿ ಪರಿಶೀಲಿಸಲು ಮನವಿ ಸಲ್ಲಿಸಿದವರು ಯಾರು?

9. ಬೀದರ್ ನಗರದಲ್ಲಿ ಮೊಟ್ಟಮೊದಲ ಬಾರಿಗೆ ಯಾವ ವರ್ಷದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು? ಸಮ್ಮೇಳನಾಧ್ಯಕ್ಷರು ಯಾರಾಗಿದ್ದರು?

ಇ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಬೀದರ್ ಪ್ರಾಂತ್ಯದ ಸಮಸ್ಯೆಯನ್ನು ವಿವರಿಸಿ.

## 3. ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ — ಅಶೋಕಕುಮಾರ ರಂಜೇರೆ

### ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಹರಪ್ಪ ಮಹೆಂಜೊದಾರೋ ಸಂಸ್ಕೃತಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಕನ್ನಡ ಪದಗಳನ್ನು ಗುರುತಿಸಿದವರು ಯಾರು?

2. ಸನ್ನತಿಯು ಯಾವ ಧರ್ಮದ ನೆಲೆಯಾಗಿತ್ತು?

3. ಮಹಾಭಾರತದ ಯಾವ ಪರ್ವಗಳಲ್ಲಿ 'ಕರ್ಣಾಟ' ಎಂಬ ಪದ ಉಲ್ಲೇಖವಾಗಿದೆ?

4. ಗಾಥಾ ಸಪ್ತಪತಿ ಕಾವ್ಯವನ್ನು ಸಂಕಲಿಸಿದವರು ಯಾರು?

5. ಕನ್ನಡ ಭಾಷೆ ಯಾವ ಭಾಷಾವರ್ಗಕ್ಕೆ ಸೇರಿದೆ?

6. ಕನ್ನಡ ಭಾಷೆಯೆ ಚರಿತ್ರೆ ತಮಿಳಿನಷ್ಟೇ ಹಳತಾದದ್ದು ಎಂದು ನಿರೂಪಿಸಿದವರು ಯಾರು? ಮತ್ತು ಯಾವ ಹೊತ್ತಿಗೆಯಲ್ಲಿ?

7. ಈಗ ದೊರೆತಿರುವ ಕನ್ನಡ ಶಾಸನಗಳಲ್ಲಿ ಅತ್ಯಂತ ಹಳೆಯದಾದ ಶಾಸನ ಯಾವುದು?

# ಆಧುನಿಕ ಪೂರ್ವ ಕನ್ನಡ ಸಾಹಿತ್ಯ

## 1. ವಚನಗಳು

**– ಬಸವಣ್ಣ, ದೇಶೀಕೇಂದ್ರ ಸಂಗನಬಸವಯ್ಯ, ಒಕ್ಕಲಿಗ ಮುದ್ದಣ್ಣ, ಅಕ್ಕಮಹಾದೇವಿ, ನುಲಿಯ ಚಂದಯ್ಯ**

**ಅ. ಈ ಮುಂದೆ ಕೊಟ್ಟಿರುವ ಪದಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಬಡಪಶು = ಅಶಕ್ತವಾದ ಪಶು, ದನ ಪಶುಪತಿ = ಒಡೆಯ, ದೇವ

ತುಡುಗುಣಿ = ಕದ್ದು ಮೇಯುವ ದನ ನಿರ್ಮಳ = ಶುದ್ಧ ಸೈದಾನ = ಕೈದಾನ

ಪ್ರಸಾದ = ದೇವರಿಗೆ ಅರ್ಪಿಸಿ ಸ್ವೀಕರಿಸುವುದು, ನೈವೇಧ್ಯ, ವಚನಕಾರರು ಆಹಾರವನ್ನೂ ಸಹ ಪ್ರಸಾದ ಎನ್ನುತ್ತಾರೆ.

ಪ್ರಸಾದಿ = ವಚನ ಧರ್ಮದಲ್ಲಿ ಐಕ್ಯಮಾರ್ಗದಲ್ಲಿಯ ಒಂದು ಹಂತ.

ಘಟಿಸಬೇಕು = ಕೂಡಬೇಕು, ಸೇರಬೇಕು ಲೇಪ = ಹಚ್ಚುವಿಕೆ, ಪೂಸು.

ಸಾವೆ = ಸಾಮೆ. ವಟಾಣೆ = ಬಟಾಣೆ. ಈಳೆ = ಕಿತ್ತಳೆ, ನಾರಿವಾಳ = ನಾರು

ಶಾಲ್ಯನ್ನ = ಉತ್ತಮ ಅಕ್ಕಿ, ಅನ್ನ, ಓಗರ = ಸುವಾಸನೆ, ಉದಕ = ಸಾರು, ನೀರು,

ಮರುಗ = ಮರುವಕ, ಸುರಭಿ, ಒಂದು ಬಗೆಯ ಸುವಾಸನೆಯ ಸಸ್ಯ.

ಮುಡಿವಾಳ = ಪರಿಮಳದ ಒಂದು ಬೇರುಳ್ಳ ಗಿಡ, ಸುವಾಸನೆಯ ಬೇರು,

ವಿಹಂಗ = ಹಕ್ಕಿ. ಅಡಿವಜ್ಜೆ = ಹೆಜ್ಜೆ ಗುರುತು

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಬಡಪಶು ಎಲ್ಲಿ ಬಿದ್ದಿತ್ತು?

2. ಬಡಪಶುವಿನ ಬಿನ್ನಹವನ್ನು ವಿವರಿಸಿ.

3. ದೇಶೀಕೇಂದ್ರ ಸಂಗನಬಸವಯ್ಯನವರು ತಮ್ಮ ವಚನದಲ್ಲಿ ಪ್ರಸಾದ ಕುರಿತು ವಿವರಿಸುವಾಗ ಯಾವ ಪಶು ಉತ್ಪನ್ನಗಳನ್ನು ಹೆಸರಿಸಿದ್ದಾರೆ?

4. 'ಜಲಚರಕೇಕೆ ತೆಪ್ಪದ ಹಂಗು?' ಸಾಲನ್ನು ವ್ಯಾಖ್ಯಾನಿಸಿರಿ.

5. 'ವಿಹಂಗಕೇಕೆ ಅಡಿವಜ್ಜೆಯ ಮೆಟ್ಟು?' ಸಾಲಿನ ಅರ್ಥವನ್ನು ವಿವರಿಸಿ.

**ಇ. ಈ ಮುಂದಿನ ವಚನದ ಭಾವಾರ್ಥ ಬರೆದು, ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.**

ಈಳೆ ನಿಂಬೆ ಮಾವು ಮಾದಲಕೆ
ಹುಳಿನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ.

–ಅಕ್ಕಮಹಾದೇವಿ

## 2. ಕೀರ್ತನೆಗಳು

### 2 (1) ಉದರ ವೈರಾಗ್ಯವಿದು – ಪುರಂದರದಾಸರು.

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಉದರ = ಹೊಟ್ಟೆ ಲೇಶ = ಸ್ವಲ್ಪ, ತುಸು. ಭಕುತಿ = ಭಕ್ತಿ.

ಮಿಂದು = ಮುಳುಗಿ, ಸ್ನಾನಮಾಡಿ. ಮದ = ಸೊಕ್ಕು ಮತ್ಸರ = ಹೊಟ್ಟೆಕಿಚ್ಚು.

ಕ್ರೋಧ = ಕೋಪ, ಸಿಟ್ಟು. ಬಿಡಾರ = ತಂಗುವ ಸ್ಥಳ. ಪ್ರತಿಮೆ = ಮೂರ್ತಿ.

ನೆರಹಿ = ಕೂಡಿಸಿ, ಅಲಂಕರಿಸಿ. ಕರದಲಿ = ಕೈಯಲ್ಲಿ. ಮೋರೆ = ಮುಖ

ಮೋರೆ = ಆರ್ತನಾದ, ಕಷ್ಟಕ್ಕೆ ಸಿಲುಕಿದವನ ಕೂಗು. ದಿಟ = ಸತ್ಯ.

ಬೂಟಕತನ = ಸುಳ್ಳು, ನಾಟಕ = ಹೊಟ್ಟೆಪಾಡು, ಡಂಬವ = ಡಂಭಾಚಾರ

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಪುರಂದರದಾಸರ ಪೂರ್ವದ ಹೆಸರನ್ನು ಬರೆಯಿರಿ.

2. ಪೂಜಾರಿಯು ಒಳಗೆ ತುಂಬಿಟ್ಟುಕೊಂಡಿರಬಹುದಾದ ದುರ್ಗುಣಗಳಾವುವು?

3. 'ಅರಿವೆಯ ಮುಸುಕನು ಮೋರೆಗೆ ಹಾಕಿ' ಎಂಬ ಸಾಲನ್ನು ವಿವರಿಸಿರಿ.

## 2 (2) ಕುಲಕುಲವೆಂದು ಹೊಡೆದಾಡದಿರಿ — ಕನಕದಾಸರು

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ನೆಲೆ = ಮೂಲ. ನೆಟ್ಟನೆ = ನೇರವಾಗಿ, ಸ್ಪಷ್ಟವಾಗಿ. ಅಟ್ಟು = ಅಡಿಗೆ ಮಾಡಿ.

ಸರ್ವಜ್ಞ = ತಿಳಿದವರು, ಜ್ಞಾನಿಗಳು. ನೆನೆ = ಸ್ಮರಿಸು.

ಬೊಬ್ಬುಳಿ = ನೀರುಗುಳ್ಳೆ, ನೀರಮೇಲಿನ ಗುಳ್ಳೆ. ಕುಲಜ = ಶ್ರೇಷ್ಠ ಕುಲದಲ್ಲಿ ಜನಿಸಿದವನು.

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:**

1. ಕನಕದಾಸರ ಅಂಕಿತನಾಮವನ್ನು ಬರೆಯಿರಿ.

2. ಕನಕದಾಸರ ಕೃತಿಗಳನ್ನು ಹೆಸರಿಸಿರಿ.

3. 'ಅಟ್ಟು ಉಣ್ಣದ ವಸ್ತುಗಳಿಲ್ಲ' ಈ ಸಾಲಿನ ಅರ್ಥವನ್ನು ವಿವರಿಸಿ.

**ಇ. ಈ ಮುಂದೆ ಸೂಚಿಸದ ಕೀರ್ತನೆಯ ಭಾಗದ ಭಾವಾರ್ಥ ಬರೆದು ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.**

ಜಲವೆ ಸಕಲ ಕುಲಕೆ ತಾಯಲ್ಲವೆ

ಜಲದ ಕುಲವನೇನಾದರೂ ಬಲ್ಲಿರಾ

ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ

ನೆಲೆಯನರಿತು ನೀ ನೆನೆಕಂಡ್ಯಾ ಮನುಜ

## 3. ತತ್ವಪದ

### ಸುಗ್ಗಿ ಮಾಡೋಣು ಬಾರವ್ವಾ – ಶಿಶುನಾಳ ಷರೀಫ

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಸುಗ್ಗಿ = ಬೆಳೆ ಕಟಾವಿನ ಕಾಲ. ಅಗ್ಗ = ಕಡಿಮೆ ಬೆಲೆ. ಹೊಲ = ಜಮೀನು.

ಒಗ್ಗಿಲಿ = ಒಗ್ಗಟ್ಟು, ಜೊತೆಗೆ ಹಿಗ್ಗಿಲಿ = ಖುಷಿಯಿಂದ

ಸಲಗಿ = ಸದರ, ಪರಿಚಯ, ಸಲಿಗೆ, ಅತಿಯಾದ ಮೃದುಸ್ವಭಾವ ಬಲು = ಬಹಳ.

ಹುಳ್ಳಿ = ಹುರುಳಿ. ಮಿಕ್ಕಿ = ಉಳಿದ. ಕಸ = ಕಳೆ.

ಕೋಲಿ = ಬೆಳೆಯನ್ನು ಕಟಾವು ಮಾಡುವಾಗ ಉಳಿಸುವ ಬೆಳೆವುಳಿಕೆ. ತರವು = ಒಳಿತು.

ಕೈಕುಡಗೋಲು = ಬೆಳೆ, ಮೇವು ಕಟಾವು ಮಾಡಲು ಬಳಸುವ ಸಾಧನ.

ಮನವ = ಮನಸ್ಸನ್ನು. ಒಗ್ಗಲಿ = ಹೊಂದಿಕೆಯಿಂದ.

ಜೋಕಿರಬೇಕು = ಎಚ್ಚರಿಕೆಯಿಂದ ಇರಬೇಕು. ಕೊಯ್ಯೋಣ = ಫಸಲು ಕತ್ತರಿಸೋಣ.

ದಣಿಸಿ = ಶ್ರಮದಿಂದ. ಸಲಗಿಯು : ಜೋಕಿರಬೇಕು = ಹುಷಾರಾಗಿರಬೇಕು.

ಅಕ್ಕಡಿ = ಸಾಲು, ಉಬ್ಬು ತಗ್ಗು, ಏಣಿಸಿ = ಹತ್ತಿ, ದಣಿಸಿ = ದುಡಿದು.

ಓಲ್ಯಾಡು = ಖುಷಿ ಪಡುತ್ತಾ, ಬಹುರಾಗದಿ = ವಿವಿಧ ರಾಗಗಳಿಂದ ಹಾಡುತ್ತಾ.

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. **'ಒಗ್ಗಿಲಿ ಕರೆದರೆ ಹಿಗ್ಗಿಲಿ ಹೋಗಿ'** ಎಂಬ ಸಾಲಿನ **ಅರ್ಥ**ವನ್ನು ವಿವರಿಸಿ.

2. **ಸುಗ್ಗಿ ಮಾಡೋಣು ಬಾರವ್ವಾ ಎಂಬ ತತ್ವಪದದಲ್ಲಿ ಹೆಸರಿಸಿರುವ ತೃಣಧಾನ್ಯಗಳ ಹೆಸರುಗಳನ್ನು ಬರೆಯಿರಿ.**

## 4. ಜನಪದ ಗೀತೆ

ಎರವಾದೆ = ಇಷ್ಟವಾದೆ. ಹೆರವರಿಗೆ = ಬೇರೆಯವರಿಗೆ

ಬ್ಯಾಸಾಗಿ = ಬೇಸಿಗೆ. ಹೊಳಿ = ಹೊಳೆ, ನದಿ. ಬ್ಯಾಡ = ಬೇಡ.

ಲೇಸ = ಹಿತ, ಒಳ್ಳೆಯದು. ಅಂದಣದ = ಪಲ್ಲಕ್ಕಿ. ಮ್ಯಾಲ = ಮೇಲೆ.

ಚವುರ = ಒಂದು ಬಗೆಯ ಬೀಸಣಿಕೆ. ಹಂಗೀನ = ಋಣದ, ಸಹಾಯದ.

ದನಿಯ = ಮಾತಿನ ಸದ್ದು. ಕರಬಂದು = ಕರುವು ಬಂದು. ಕಳುಹಿ = ಕಳುಹಿಸಿ.

ಕಣ್ಣೀಗಿ = ಕಣ್ಣಿಗೆ. ಸೆಲ್ಲೆದೆಲೆ = ಸೆಲ್ಲೆಯಿಂದ, ಶಲ್ಯಯಿಂದ.

ಕುಡಿಯಂಗ = ಚಿಗುರಿನಂತೆ, ಸದಾ ಹಸಿರಾಗಿರುವಂತೆ.

### ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ನೀರಿಲ್ಲದ ಕೆರೆಗೆ ನೀರು ಕುಡಿಯಲು ಬಂದು ದುಃಖದಿಂದ ಹಿಂದಿರುಗಿದ ಪ್ರಾಣಿ ಯಾವುದು?

2. ಅಪ್ಪ ತನ್ನ ಮಗಳಿಗೆ ಉಡುಗೊರೆಯಾಗಿ ಕೊಟ್ಟ ಪ್ರಾಣಿ ಯಾವುದು?

### ಇ. ಈ ಮುಂದಿನ ತ್ರಿಪದಿಯ ಭಾವಾರ್ಥ ಬರೆದು ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.

ಅರಗಿನಂಥ ತಾಯಿ ಮರದಂಥ ಮಕ್ಕಳು
ಕರಗಿದರ ಬೆಣ್ಣೆ ತಿಳಿತುಪ್ಪ । ದಂಥಾಕಿ
ಕರಗಂಥ ತಾಯಿ ಇರಬೇಕ॥

# ಭಾಗ 3. ಆಧುನಿಕ ಕಾವ್ಯ

## 3 (1) ಆಧುನಿಕ ಕಾವ್ಯ : ಮಂಕುತಿಮ್ಮನ ಕಗ್ಗ – ಡಿ. ವಿ. ಜಿ.

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಹಾಗೂ ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಮೇಳವಿಸೆ = ಕೂಡಿಕೊಂಡು, ಜಸವು = ಯಶಸ್ಸು. ವಿಧಿಯದರ = ಅದೃಷ್ಟವು ಅದರ,

ಪೇಳ್ದಂತೆ = ಹೇಳಿದಂತೆ, ಕುಸಿಯೆ = ಕೆಳಕ್ಕೆ ಇಳಿ, ಮಿಗೆ = ಹೆಚ್ಚಾಗಿ, ಅಧಿಕವಾಗಿ.

ಜಟಕಾ ಬಂಡಿ = ಒಂಟಿ ಕುದುರೆಯ ಗಾಡಿ. ಮಸಣ = ಸುಡುಗಾಡು

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಋಷಿ ವಾಕ್ಯದೊಡನೆ ಯಾವುದು ಮೇಳವಿಸಬೇಕು ಎಂದು ಕವಿ ಬಯಸುತ್ತಾರೆ?

2. 'ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ' ಈ ಸಾಲಿನ ಅರ್ಥವನ್ನು ಬರೆಯಿರಿ

**ಇ. ಈ ಮುಂದಿನ ಕಗ್ಗದ ಭಾವಾರ್ಥ ಬರೆದು ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.**

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು ।
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನ – ಜೀವನಕೆ – ಮಂಕುತಿಮ್ಮ

## 3 (2) ಪುಟ್ಟ ವಿಧವೆ – ದ. ರಾ. ಬೇಂದ್ರೆ

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಹಾಗೂ ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಗಲ್ಲ = ತುಟಿಯ ಕೆಳಗಡೆಯ ಭಾಗ. ಮುಗಬೊಟ್ಟು = ಮೂಗುತಿ, ಮೂಗಿನ ಒಂದು ಆಭರಣ, ನತ್ತು.
ಶೋಭನ = ಪ್ರಸ್ತ, ಪ್ರಥಮ ಸಂಭೋಗ. ಚೊಚ್ಚಿಲು, ಚೊಚ್ಚಲು = ಮೊದಲನೆ ಹೆರಿಗೆ, ಮೊದಲು.
ಅಂಗಾರ = ಇದ್ದಲಿ, ಇಂಗಾಲ. ಗೂಗೆ = ಗೂಬೆ. ವೈದಿಕರು = ಪುರೋಹಿತರು. ಕಂಬನಿ = ಕಣ್ಣೀರು.
ಕೊರಲು = ಕೊರಳು, ಕತ್ತು, ಕಂಠ, ಧ್ವನಿ. ಕೋಡು = ಕೊಂಬು.

**ಆ. ಈ ಮುಂದಿನ ಸಾಲುಗಳ ಭಾವಾರ್ಥ ಬರೆಯಿರಿ. .**

ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು, ತಾಯಿಗುಳಿದಿತೇನು?
ಮೈ–ಗೋರಿಯಲಿ ಮಡಗಿ ಜೀವ, ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು

## 3 (3) ರೈತನ ದೃಷ್ಟಿ – ಕುವೆಂಪು

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಹಾಗೂ ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಚರೆ = ಭತ್ತದ ಅರಳಿನಂತೆ ಬಂದೂಕಿನಿಂದ ಹಾರಿಸುವ ಸಿಡಿಮದ್ದು. ಲಾಜೆ= ಅರಳು, ಭತ್ತದ ಅರಳು.

ಸಾಮ್ರಾಜ್ಯವಾವಗಂ = ಸಾಮ್ರಾಜ್ಯವು ಯಾವಾಗಲೂ ಮೊಗಲರಾಳ್ವಿಕೆಯೋ? ಮೊಗಲರ ಆಳ್ವಿಕೆ ಆದರೇನು?. ಮುಡಿಯೊಂದನಾಂತೊಡನೆ = ಕಿರಿಟವೊಂದನ್ನು ಪಡೆದ ಮಾತ್ರಕ್ಕೆ.

ಮೆರವಣಿಗೆಗಾನು= ಮೆರವಣಿಗೆಗೆ ನಾನು. ಸಾಮ್ರಾಜ್ಯಕಾಳಿಗಾನಲ್ತೆ = ಸಾಮ್ರಾಜ್ಯವೆನ್ನುವ ಮಾರಿಗೆ ಬಲಿ ಕೊಡುವ ಕುರಿ ನಾನಲ್ಲವೆ?.

ಕುಯ್ಗುರಿಯನೆಂತಂತೆ = ಬಲಿಪಶುವಾದ ಕುರಿಯನ್ನು ಹೇಗೆ ಕತ್ತರಿಸುವರೋ ಹಾಗೆ.

ಗರಗಸದಿಂದ = ಗರಗಸವನ್ನು ಬಳಸಿ.

ಸಿಡಿಮದ್ದಿನಕ್ಷತೆಗೆ = ಅಕ್ಷತೆಯಂತೆ ಸುರಿಯುವ ಸಿಡಿಮದ್ದುಗಳಿಗೆ.

ಸೊರಗಿದೆನ್ನಾಣೆ = ಸೊರಗಿರುವೆ ನನ್ನ ಆಣೆ

ಮರುಳಾಗೆನೆಂದಿಗೂ = ಮರುಳಾಗಲಾರೆನು ಎಂದೆಂದಿಗೂ

ಗೊಬ್ಬರವನನುದಿನಂ = ಗೊಬ್ಬರವನ್ನು ಪ್ರತಿದಿನ.

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. 'ಕತ್ತಿ ಪರದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದಹಾಕಿ ತಿವಿದರದು ಹೂವೆ?' ನಾಲ್ಕು ವಾಕ್ಯಗಳಲ್ಲಿ ಈ ಸಾಲುಗಳ ಅರ್ಥವನ್ನು ಬರೆಯಿರಿ.

2. 'ಸಾಮ್ರಾಜ್ಯ ಶೂರ್ಪನಖಿ ಮೋಹಿನಿಯ ರೂಪಕ್ಕೆ ಇನ್ನು ಮುಂದೆ ಮರುಳಾಗಬೇಡಿ' ಎನ್ನುವ ಕವಿಯು ಯಾರ ಯಾರ ಮೇಲೆ ಆಣೆ ಇಡುತ್ತಾರೆ?

## 3 (4) ಅನ್ನದ ಋಣ – ಚನ್ನವೀರ ಕಣವಿ

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಹಾಗೂ ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಎಡೆ = ಬೆಳೆಯ ಸಾಲುಗಳ ಮಧ್ಯೆ ಕಳೆ ತೆಗೆಯುವ ಸಾಧನ. ಸುಳಿ = ಕುಡಿ, ಚಿಗುರು,

ಚರಗ = ಬೆಳೆ ಪೂಜೆಯಂದು ಭೂಮಿಗೆ ಅರ್ಪಿಸುವ ನೈವೇದ್ಯ.

ಕಣ = ಧಾನ್ಯವನ್ನು ಒಕ್ಕುವ ಸ್ಥಳ.

ಬಣವೆ = ಒಣಗಿದ ಮೇವನ್ನು ಸಂಗ್ರಹಿಸುವ ರೀತಿ ಮತ್ತು ಸ್ಥಳ, ಹುಲ್ಲಿನ ಮೆದೆ.

ಮುಗ್ಗು = ಬೂಷ್ಟು, ಹಳಸಲು.

ಮಸಾರಿಗೆ = ಕೃಷಿಯ ಕೆಂಪು ಭೂಮಿಗೆ

ಗೊಂಡೆಯಾಗಿ = ಗೊಂಡೆ: ಗೊಂಚಲು, ಗುಚ್ಛ, ತೆನೆ.

ಹಂತಿಯ = ಕಟಾವು ಮಾಡಿದ ಬೆಳೆಸಸ್ಯದಿಂದ ಕಾಳನ್ನು ಬೇರೆಮಾಡುವ ಕಾರ್ಯದ.

ಉಳ್ಳಾಗಡ್ಡೆ = ಈರುಳ್ಳಿ, ನೀರುಳ್ಳಿ. ಹಿಟ್ಟಾಗಿ = ರೊಟ್ಟಿ ಮಾಡಲು ಬಳಸುವ ಧಾನ್ಯ ಹುಡಿ.

ಕಸಿವಿಸಿಗೊಂಡು = ತಳಮಳಗೊಂಡು. ಅವುಡುಗಚ್ಚಿ = ಕೆಳತುಡಿಯನ್ನು ಕಚ್ಚಿ.

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಚರಗ ಪದದ ಅರ್ಥವೇನು?

2. ಅನ್ನದ ಬೆಲೆ ನಿಜವಾಗಿಯೂ ಯಾರಿಗೆ ಗೊತ್ತೆಂದು ಕವಿಯು ಭಾವಿಸಿರುವರು?

3. ಧಾನ್ಯಗಳನ್ನು ಮುಚ್ಚಿಟ್ಟಾಗ ಧಾನ್ಯಗಳಿಗೆ ಏನಾಗಬಹುದೆಂದು ಕವಿ ವ್ಯಥೆಪಡುತ್ತಾರೆ?

ಇ. ಅನ್ನದ ಋಣ ಕವಿತೆಯಲ್ಲಿ ಚಿತ್ರಿತವಾಗಿರುವ ವಸ್ತುವನ್ನು ಆಧರಿಸಿ ವಿವರಣಾತ್ಮಕ ನಿಬಂಧವನ್ನು ಬರೆಯಿರಿ.

**3 (5) ಕನ್ನಡವೆಂದರೆ ಬರಿ ನುಡಿಯಲ್ಲ..** **– ಕೆ. ಎಸ್. ನಿಸಾರ್ ಅಹಮದ್**

**ಅ. ಈ ಮುಂದಿನ ಕವಿತೆಯ ಭಾಗಗಳ ಭಾವಾರ್ಥವನ್ನು ಬರೆದು ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.**

ಕನ್ನಡವೆಂದರೆ ಜನಜಂಗುಳಿಯಲ್ಲ
ಜೀವನ ಶೈಲಿ, ವಿಧಾನ;
ವಾಯುವೆಂದರೆ ಬರಿ ಹವೆಯೇ ಅಲ್ಲ;
ಉಸಿರದು, ಪಂಚಪ್ರಾಣ.

ಕನ್ನಡವಲ್ಲ ತಿಂಗಳು ನಡೆಸುವ
ಗುಲ್ಲಿನ ಕಾಮನಬಿಲ್ಲು;
ರವಿ ಶಶಿ ತಾರೆಯ ನಿತ್ಯೋತ್ಸವವದು
ಸರಸತಿ ವೀಣೆಯ ಸೊಲ್ಲು.

## 3 (6) ಬಿಸಿಲುಗುದುರೆಯನೇರಿ ಹೋದಾ – ಚಂದ್ರಶೇಖರ ಕಂಬಾರ

### ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಹಾಗೂ ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.

ಅಬ್ಬೆ = ತಾಯಿ. ಗ್ಯಾನ = ಚಿತ್ತ. ಕದ = ಬಾಗಿಲು.
ಮಿಗ = ಮಿಕ, ಹಂದಿ. ಅಗಳಿ = ಚಿಲಕ. ಎವ್ವ = ಅವ್ವ.
ಯಕ್ಷ = ಯಕ್ಷ ಸ್ತ್ರೀ, ದೇವತೆಗಳಲ್ಲಿ ಒಂದು ವರ್ಗ.
ಸೆರಗೊಡ್ಡಿ = ಬಹಳ ವಿನಯದಿಂದ.
ಬಿಸಿಲುಗುದುರೆಯನೇರಿ = ಭ್ರಮೆಯನ್ನು ಉಂಟುಮಾಡುವ ಜಲಮೃಗವನ್ನು ಹತ್ತಿಕೊಂಡು.

### ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬಿಸಿಲುಗುದುರೆಯನೇರಿ ಹೋದಾ ಪದ್ಯದಲ್ಲಿ ಬರುವ ಕರುವಿನ ಹೆಸರೇನು.

2. ಲಕ್ಕಬ್ಬೆಯ ಮಗನ ಹೆಸರು ಬರೆಯಿರಿ.

3. ಕರು ಕಪಿಲೆಯು ಕೊಟ್ಟ ಶಕುನವನ್ನು ವಿವರಿಸಿ ಬರೆಯಿರಿ.

4. ಲಕ್ಕಬ್ಬೆಯ ಸ್ವಪ್ನದಲಿ ಬಂದ ವ್ಯಕ್ತಿಯು ಹೇಗಿದ್ದರು ವಿವರಿಸಿ.

5. ಮಗನು ಯಕ್ಷಿಯನ್ನು ಹೊತ್ತುಕೊಂಡು ಬಂದಾಗ ಲಕ್ಕಬ್ಬೆ ಪ್ರತಿಕ್ರಿಯಿಸಿದ ಬಗೆಯನ್ನು ವಿವರಿಸಿರಿ.

## 3 (7) ನನ್ನ ಕವನ – ಸಿದ್ದಲಿಂಗಯ್ಯ

**ಅ. ಈ ಪದಗಳ ಅರ್ಥಗಳನ್ನು ಓದಿ ತಿಳಿಯಿರಿ**

ಬಂಡಾಯದ = ಪ್ರತಿಭಟನೆಯ, ದಂಗೆ ಎದ್ದ
ನಿರಾಭರಣೆ = ಆಭರಣ ಧರಿಸಿರದ ಸುಂದರಿ
ಕಂಗೆಟ್ಟವರಿಗೆ = ಗಾಬರಿಯಾದವರಿಗೆ, ತಬ್ಬಿಬ್ಬುಗೊಂಡವರಿಗೆ
ನಾನಾಡಿದ = ನಾನು ಮಾತನಾಡಿದ

**ಆ. ಈ ಮುಂದಿನ ಕವಿತೆಯ ಭಾಗದ ಭಾವಾರ್ಥವನ್ನು ಬರೆದು ವಿಶಿಷ್ಟತೆಯನ್ನು ಸ್ಪಷ್ಟಪಡಿಸಿ.**

ಕಾಡಿನ ನಡುವೆ ಕಂಗೆಟ್ಟವರಿಗೆ
ಕಂಡ ದಾರಿ ಕವನ
ನಡುರಾತ್ರಿಯಲಿ ನಡುಗುವ ಜನತೆಗೆ
ಧೈರ್ಯ ಕೊಡುವ ಕವನ

# ಭಾಗ 4. ಕಥೆಗಳು

## ಕಥೆ 1 ಹಬ್ಬ ಮತ್ತು ಬಲಿ – ಬಿ. ಟಿ. ಲಲಿತಾನಾಯಕ್

**ಅ. ಈ ಮುಂದೆ ಕೊಟ್ಟಿರುವ ಪದಗಳನ್ನು ಮತ್ತು ಅವುಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಗರೀಬ = ಬಡತನ. ಪಚಗರಿ = ಹರಡಿ. ಮರೆ = ಮರಿ.
ತಾಂಬಾಣ = ತಾಂಬಾಣೆ, ಒಂದು ಬಗೆಯ ಪಾತ್ರೆ.
ಗಂಗಳ = ಊಟ ಮಾಡಲು ಬಳಸುವ ತಟ್ಟೆ. ತಲಬು = ಚಟ.
ಓಸು = ಒಟ್ಟು. ಅಣತಿ = ಆಜ್ಞೆ. ಯೋಕ್ತೆ = ಯೋಗ್ಯತೆ.
ಪಾವ್ಣ = ಪಾವನ. ಕ್ವಾ = ತೆಗೆದುಕೋ. ಅರಿವೆ = ಬಟ್ಟೆ.
ಮಜಬೂತ್ = ದಷ್ಟಪುಷ್ಟ. ಜುಲ್ಮೆ = ಒತ್ತಾಯ. ಲುಕ್ಸಾನು = ನಷ್ಟ.
ಗುಡ್ಲಾಗೆ = ಗುಡಿಸಲಿನಲ್ಲಿ.

ಸೋಗೆಮನೆ = ಸೋಗೆ ಹುಲ್ಲು ಅಥವಾ ತೆಂಗಿನ ಗರಿ ಅಥವಾ ಅಡಿಕೆ ಗರಿಗಳನ್ನು ಮೇಲ್ಹಾವಣೀಯನ್ನಾಗಿ ಮಾಡಿಕೊಂಡ ಮನೆ.
ತೋಯ್ದು ತೊಪ್ಪಡಿ = ಮಳೆಯಿಂದ ನೆನೆದುಹೋದ ಮೈ.
ಉಣ್ರಿ = ಊಟ ಮಾಡಿರಿ. ಕೈಗಡ = ಸಾಲ.

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಹಬ್ಬ ಮತ್ತು ಬಲಿ ಕತೆಯಲ್ಲಿ ಯಾವ ಪ್ರಾಣಿಯನ್ನು ಮಾರಮ್ಮನಿಗೆ ಬಲಿ ಕೊಡಲಾಯಿತು?

2. ಹಬ್ಬದ ಸಂದರ್ಭದಲ್ಲಿ ಅಭಿನಯಿಸಲಾದ ನಾಟಕದ ಹೆಸರೇನು?

3. ಕೈಗಡ ಪದದ ಅರ್ಥವೇನು?

4. ಸಣ್ಣ ಹಬ್ಬ ಮಾಡಲು ಸಾಹುಕಾರ ಮಲ್ಲೇಶಪ್ಪನವರಿಂದ ಪಡೆದುಕೊಂಡ ಹಣ ಎಷ್ಟು?

**ಇ. ಹಬ್ಬ ಮತ್ತು ಬಲಿ ಕಥೆಯಲ್ಲಿ ಚಿತ್ರಿತವಾಗಿರುವ ಹಬ್ಬ, ದೇವರು ಮತ್ತು ಬದುಕುಗಳ ಸ್ವರೂಪವನ್ನು ಅವಲೋಕಿಸಿ.**

## ಕಥೆ 2 ಚಿನ್ನ ಮತ್ತು ಮರ – ಹಿ. ಚಿ. ಬೋರಲಿಂಗಯ್ಯ

**ಅ. ಒಂದು ವಾಕ್ಯದಲ್ಲಿ ಉತ್ತರಿಸಿ.**

1. ರಾಜನಿಗೆ ಅರಮನೆಯ ವಸ್ತುಗಳನ್ನು ಚಿನ್ನದಿಂದ ಮಾಡಿಸಲು ಹೇಗೆ ಸಾಧ್ಯವಾಯಿತು?

2. ಯಾರ ನಿಟ್ಟುಸಿರು ರಾಜನಿಗೆ ಶಾಪವಾಯಿತು?

3. ಮಾತನಾಡುವ ಗಿಳಿ ಯಾರ ಬಾಯಿಂದ ಹೇಗೆ ಬಂತು?

4. ಮಂತ್ರಿಗೆ ಜ್ಞಾನೋದಯವಾದದ್ದು ಹೇಗೆ?

5. ನಿನ್ನ ಈ ಹಾರ ತುರಾಯಿಗಳು ಯಾರಿಗೆ ಬೇಕು? ಎಂದು ಯಾರು ಯಾರಿಗೆ ಹೇಳಿದರು?

6. ಔಷಧಿ ನೀಡುವವರ ಮೇಲೆ ರಾಜನು ನಂಬಿಕೆಯನ್ನು ಏಕೆ ಕಳೆದುಕೊಂಡಿದ್ದನು?

7. ರಾಜನು ವಿಚಿತ್ರ ವ್ಯಕ್ತಿಯನ್ನು ಆಚೆ ಕಳಿಸೆಂದ ವಿಷಯ ಮಂತ್ರಿ ಆತನಿಗೆ ತಿಳಿಸಿದಾಗ ಏನಾಯಿತು?

8. ವಿಚಿತ್ರ ವ್ಯಕ್ತಿ ಬಗ್ಗೆ ರಾಜನಿಗೆ ಗೌರವ ಉಂಟಾಗಲು ಕಾರಣವೇನು?

9. ರಾಜನಲ್ಲಿ ಭಯ ಉಂಟುಮಾಡುವ ಸನ್ನಿವೇಶ ಯಾವುದು?

10. ರಾಜ ಅರಮನೆಯಿಂದ ಎಷ್ಟು ದೂರದಲ್ಲಿ ಸಂಸಾರ ಹೂಡಬೇಕಾಯಿತು?

11. ರಾಜ ಕಮ್ಮಾರರಿಂದ ಏನನ್ನು ಬೇಡಿ ಪಡೆದ?

12. ರಾಜ ಭೂಮಿಯನ್ನು ಉತ್ತು ಸಿದ್ಧಗೊಳಿಸಿದಾಗ ಆದದ್ದೇನು?

13. ಕೀಟ ಸ್ಪರ್ಶ ಪಡೆದ ಹೂಗಳು ಏನಾದವು?

14. ರಾಜನಿಗೆ ಮರಗಿಡಗಳ ಒಡನಾಟದಿಂದ ಮನವರಿಕೆಯಾದದ್ದು ಏನು?

15. ರಾಜ ಅರಮನೆಗೆ ಹೋಗುವ ವಿಚಾರವಾಗಿ ಕೇಳಿದಾಗ ಹಿರಿಯ ರಾಣಿ ಹೇಳಿದ್ದೇನು?

**ಆ. ಎಂಟು ವಾಕ್ಯಗಳಿಗೆ ಮೀರಿರುವಂತೆ ಉತ್ತರಿಸಿ.**

1. ರಾಜನಿಗೆ ಅರಮನೆಯ ವಸ್ತುಗಳನ್ನು ಚಿನ್ನದಿಂದ ಮಾಡಿಸಲು ಹೇಗೆ ಸಾಧ್ಯವಾಯಿತು?

2. ರಾಜ ಸಂಪತ್ತಿನ ಮುಖ್ಯ ಭಾಗವಾದ ಚಿನ್ನವನ್ನು ಯಾರಿಗೆ ಬಳುವಳಿಯಾಗಿ ನೀಡಲಾಗುವುದೆಂದನು? ಮತ್ತು ಹೇಗೆ?

3. ಕಥೆಯಲ್ಲಿ ಬರುವ ವಿಚಿತ್ರ ವ್ಯಕ್ತಿ ಪಾತ್ರ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

4. ಕಥೆಯಲ್ಲಿ ಬಂಗಾರದ ನಿಜಸ್ವರೂಪ ವ್ಯಕ್ತವಾದ ಬಗ್ಗೆ ತಿಳಿಸಿ.

5. ವ್ಯಕ್ತಿ ಸಂಪಾದನೆಯ ಮೋಹಕ್ಕೆ ಕಥೆ ಸೂಚಿಸುವ ನೀತಿಯನ್ನು ಅವಲೋಕಿಸಿ.

6. ರಾಜನ ಆರನೆಯ ಹುಣ್ಣು ವಾಸಿಯಾಗಲು ಕಾರಣವೇನು?

7. ಕಥೆಯನ್ನು ಅನುಲಕ್ಷಿಸಿ ಮನುಷ್ಯ ಭೂಮಿಯ ಮೇಲೆ ಅಧಿಕಾರವನ್ನು ಸಾಧಿಸಿದ್ದರ ಪರಿಣಾಮಗಳನ್ನು ಸಮಾಲೋಚಿಸಿ.

8. ಕಥೆಯಲ್ಲಿ ನಾಗರ ಬೆತ್ತ ಮತ್ತು ಗಿಳಿ ಏನನ್ನು ಸಂಕೇತಿಸುತ್ತವೆ ವಿವರಿಸಿ.

# ಸಾಂಸ್ಕೃತಿಕ ಕನ್ನಡ ಪಠ್ಯ : ದ್ವಿತಿಯಾರ್ಧದ ಭಾಗ

## ಪರಿವಿಡಿ


| ಕ್ರಮ ಸಂಖ್ಯೆ | ಅಧ್ಯಾಯ | ಪುಟ ಸಂಖ್ಯೆ |
|---|---|---|
| 1. | ನಮ್ಮ ಎಮ್ಮೆಗೆ ಮಾತು ತಿಳಿಯುವುದೆ? ಗೊರೂರು ರಾಮಸ್ವಾಮಿ ಐಯಂಗಾರ್ | |
| 2. | ಎತ್ತುಗಳಿಗೆ ಹೆಂಡಂದಿರಿಲ್ಲ! ಡಾ. ಟಿ. ಎಸ್. ರಮಾನಂದ | |
| 3. | ಬಾ ಇಲ್ಲಿ ಸಂಭವಿಸು ಡಾ. ಮಿರ್ಜಾ ಬಷೀರ್ | |
| 4. | ಅವ್ವನ ಕುರಿ ಬಯಕೆ ಡಾ. ಜಿ. ಸಂಜೀವರಾಯ | |
| 5. | ಸಾಲ್ಮನ್‌ಗಳ ಜೀವನಯಾತ್ರೆ ಡಾ. ಕೆ. ಪುಟ್ಟಸ್ವಾಮಿ, ಕೃಪಾಕರ್ ಮತ್ತು ಸೇನಾನಿ | |
| 6. | ನೊಬೆಲ್ ವಿಜ್ಞಾನಿ ಕ್ರೆಬ್ಸ್ ಪ್ರೊ. ಎಂ. ನಾರಾಯಣ ಸ್ವಾಮಿ | |
| 7. | ಕನ್ನಡ ಕೃಷಿ ವಿಜ್ಞಾನ ಸಾಹಿತ್ಯದ ಉಗಮ ಮತ್ತು ವಿಕಾಸ ಪ್ರೊ. ಜೆ. ಬಾಲಕೃಷ್ಣ | |
| 8. | ಕರ್ನಾಟಕದ ಪ್ರಸಿದ್ಧ ಕೃಷಿ ವಿಜ್ಞಾನಿಗಳು ಪ್ರೊ. ಎಂ. ನಾರಾಯಣ ಸ್ವಾಮಿ ಮತ್ತು ಪ್ರೊ. ಜೆ. ಬಾಲಕೃಷ್ಣ | |
| 9. | ಕನ್ನಡ ಪಾರಿಭಾಷಿಕ ಪದಕೋಶ ಸಂಗ್ರಹ | |

# ಪ್ರಬಂಧ 1. ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?

ಗೊರೂರು ರಾಮಸ್ವಾಮಿ ಐಯಂಗಾರ್

## ಅ. ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕರು 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಪ್ರಬಂಧ ಬರೆದ ಕಾಲದಲ್ಲಿ ಭಾರತದ ಜನಸಂಖ್ಯೆ ಎಷ್ಟಿತ್ತು? ಆಹಾರ ನಿಪುಣರ ಸಲಹೆಯ ಪ್ರಕಾರ ಪ್ರತಿಯೊಬ್ಬರೂ ಎಷ್ಟು ಔನ್ಸು ಹಾಲನ್ನು ಕುಡಿಯಬೇಕಿತ್ತು?

2. ಎಮ್ಮೆಗೆ ಪ್ರಸವ ವೇದನೆ ಪ್ರಾರಂಭವಾಗಿದೆ ಎಂದು ಸೂಚಿಸಿದ ವ್ಯಕ್ತಿಯ ಹೆಸರೇನು?

3. ಎಮ್ಮೆಗೆ ಯಾವ ಖಾಯಿಲೆ ಬಂದಾಗ ಪಶುವೈದ್ಯರನ್ನು ಕರೆಸಲಾಯಿತು?

## ಆ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಒಂದು ಮಗುವಿಗೆ ಹಾಲು ಬೇಕಾದಾಗ ಹಾಲಿಗಾಗಿ ಸಹಪ್ರಯಾಣಿಕರು ಪಟ್ಟ ಪಾಡನ್ನು ವಿವರಿಸಿ.

2. ಎಮ್ಮೆಯಿಂದ ಹಾಲು ಕರೆದುಕೊಳ್ಳಲು ಲೇಖಕರು ಧರಿಸಿದ ವೇಷದ ಕುರಿತು ಬರೆಯಿರಿ?

## ಕಥೆ : ಎತ್ತುಗಳಿಗೆ ಹೆಂಡಂದಿರಿಲ್ಲ!

ಡಾ. ಟಿ. ಎಸ್. ರಮಾನಂದ

**ಅ. ಪದಗಳ ಅರ್ಥಗಳನ್ನು ಓದಿ ತಿಳಿಯಿರಿ.**

ವಾಡಿಕೆ : ಅಭ್ಯಾಸ
ಬಾವು : ಊತ
ಎಲ್ಡು : ಎರಡು
ಹುಳ್ಳಿ : ಹುರುಳಿ
ಹೆಂಡ್ರ : ಹೆಂಡತಿಯ
ಯತ್ವಾಸ : ವ್ಯತ್ಯಾಸ
ಸಾಯಾಮಟ್ಟ : ಸಾಯುವತನಕ
ಹುಡ್ರು : ಹುಡುಗರು
ಸತ್ರು : ಶತ್ರು, ವೈರಿ

**ಆ.ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಎತ್ತುಗಳಿಗೆ ಯಾವ ಖಾಯಿಲೆ ಬಂದಿದ್ದರಿಂದ ಪಶುವೈದ್ಯರನ್ನು ಕರೆಸಲಾಯಿತು?

2. ನಾರಾಯಣಿಯು ಪಶುವೈದ್ಯರೊಂದಿಗೆ ಯಾವ ಉದ್ದೇಶಕ್ಕಾಗಿ ಪೇಟೆಗೆ ಬಂದನು?

**ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ತಿಮ್ಮಾನಾಯಕರ ಕೂಡು ಕುಟುಂಬದ ರಚನೆಯನ್ನು ವಿವರಿಸಿ.

2. ರಾಮ ಮತ್ತು ಲಕ್ಷಣ ಹೆಸರಿನ ಎತ್ತುಗಳು ಯಾವ ತಳಿಯವು ಮತ್ತು ಯಾವ ಬಣ್ಣದ್ದವಾಗಿದ್ದವು?

3. ರಾಮ ಎಂಬ ಎತ್ತು ಸತ್ತಾಗ ಲಕ್ಷ್ಮಣ ಎಂಬ ಎತ್ತು ಮರುಕಪಟ್ಟ ಬಗೆಯನ್ನು ವಿವರಿಸಿ.

## ಕಥೆ : ಬಾ ಇಲ್ಲಿ ಸಂಭವಿಸು

**ಡಾ. ಮಿರ್ಜಾ ಬಷೀರ್**

**ಅ. ಪದಗಳ ಅರ್ಥಗಳನ್ನು ಓದಿ ತಿಳಿಯಿರಿ.**

ತಪ್ಪಡೆ : ಒದ್ದೆ

ಈಡಲ್ಲ : ಸೂಕ್ತವಲ್ಲ

ಪುಪ್ಪುಸ : ಶ್ವಾಸಕೋಶ

ಅನಿರ್ವಚನೀಯ : ವರ್ಣಿಸಲು ಅಸಾಧ್ಯವಾದ

**ಆ.ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಅಮೀನಮ್ಮ ಸಾಕಿದ ಹಸುವಿನ ತಳಿ ಯಾವುದು?

2. ಜೋಸೆಫ್‌ರ ಹೆಂಡತಿಯ ಮರಣಕ್ಕೆ ಕಾರಣವಾದ ಖಾಯಿಲೆ ಯಾವುದು?

**ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕೃತಕ ಗರ್ಭಧಾರಣೆ ಮಾಡಿದ ನಂತರ ಜೋಸೆಫ್‌ರವರನ್ನು ಉದ್ದೇಶಿಸಿ ಪಶುವೈದ್ಯರು ಫಲ ಹೇಗೆ ಕೂಡುತ್ತದೆ ಎಂದು ಆಡಿದ ಮಾತುಗಳನ್ನು ಬರೆಯಿರಿ.

2. ಕರು ಹಾಕುವ ಸಂದರ್ಭದಲ್ಲಿ ಹಸುವನ್ನು ಅಮೀನಮ್ಮ ಹೇಗೆ ಸಂತೈಸುತ್ತಾಳೆ ?

3. ಕರು ಹುಟ್ಟಿದ ಮೇಲೆ ಅಮೀನಮ್ಮ ಸಂಭ್ರಮಪಡಲು ಕಾರಣವೇನು?

4. ಎಳೆಗರು ಹಾಲು ಕುಡಿಯಲು ಅಮೀನಮ್ಮ ಹೇಗೆ ನೆರವಾದಳು?

5. ಕರುವಿಗೆ ಹಾಲುಣಿಸುವಾಗ ಹಸುವಿನ ವರ್ತನೆಯನ್ನು ವಿವರಿಸಿ?

6. ಜೋಸೆಫ್‌ರ ಹಸು ಗರ್ಭಧರಿಸಿದ್ದಕ್ಕೆ ಪಶುವೈದ್ಯರು ರೋಮಾಂಚನಗೊಳ್ಳಲು ಕಾರಣವೇನು?

# ಕಥೆ: ಅವ್ವನ ಕುರಿ ಬಯಕೆ

ಡಾ. ಜಿ. ಸಂಜೀವರಾಯ

**ಅ. ಪದಗಳ ಅರ್ಥಗಳನ್ನು ಓದಿ ತಿಳಿಯಿರಿ.**

ಟಾರ್ : ಡಾಂಬರು

ಕರಿಕಲ್ಲಾಗಿ : ಕಪ್ಪಾಗಿ

ಹಿಟ್ಟಿನ ಕೋಲು : ರಾಗಿಮುದ್ದೆ ಮಾಡಲು ಬಳಸುವ ಕೋಲು

ನೇತಾಕಿಕೊಂಡು : ಸಾಕಿಕೊಂಡು

**ಆ.ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಊರಿನ ಕೆಲವರ ಹೊಲಗಳ ವಿಸ್ತಾರ ಎಷ್ಟಿತ್ತು?

2. ಹಿಟ್ಟಿನ ಕೋಲಿನಲ್ಲಿ ಹೊಡೆತ ತಿಂದ ಲೇಖಕರು ಎಲ್ಲಿ ಹೋಗಿ ಬಿದ್ದರು?

3. ಬದುಕಿಗೆ ಆಸರೆಯಾಗಲೆಂದು ತಾಯಿಯು ಏನನ್ನು ನೇತಾಕಿಕೊಂಡರು?

**ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಲೇಖಕರ ಮನೆಯನ್ನು ಹಸನು ಮಾಡಿಕೊಳ್ಳಲು ಅವರ ತಾಯಿ ಪಟ್ಟ ಪಡಿಪಾಟಲು ಏನು?

2. ಹಸುಗಳು ನೇಗಿಲಿಗೆ ಒಗ್ಗಿಕೊಳ್ಳಲು ಹೇಗೆ ಅಭ್ಯಾಸ ಮಾಡಿಸಲಾಯಿತು?

## ಲೇಖನ : ಸಾಲ್ಮನ್‌ಗಳ ಜೀವನಯಾತ್ರೆ

**ಡಾ. ಕೆ. ಪುಟ್ಟಸ್ವಾಮಿ, ಕೃಪಾಕರ್ ಮತ್ತು ಸೇನಾನಿ**

### ಅ. ಪದಗಳ ಅರ್ಥವನ್ನು ಓದಿ ತಿಳಿಯಿರಿ.

ಮುಖಜ : ಪ್ರಾರಂಭ

ಕಂದು ಕರಡಿ: ಕಂದು ಬಣ್ಣದ ಕರಡಿ ಕುಟುಂಬದ ಪರಭಕ್ಷಕ ಸಸ್ತನಿ.

ಉಸುಕು: ಮರಳು

ಅಂಡಕ: ಅಂಡಾಣು

ಶುಕ್ಲ : ವೀರ್ಯ

### ಆ. ಒಂದು ವಾಕ್ಯದಲ್ಲಿ ಉತ್ತರಿಸಿ.

1. ಸಾಲ್ಮನ್ ಮೀನುಗಳ ಜೀವನಯಾತ್ರೆಯ ವಿವರಕ್ಕಾಗಿ ಸಾಲ್‌ಮನ್ ಕುಟುಂಬದ ಯಾವ ಜಾತಿಯ ಮೀನನ್ನು ಮಾದರಿಯಾಗಿ ತೆಗೆದುಕೊಳ್ಳಲಾಗಿದೆ?

2. ಸಾಲ್ಮನ್ ಮೀನುಗಳ ವಾಸನೆಯ ನೆನಪು ಯಾವ ಸಮಯದಲ್ಲಿ ಜಾಗೃತವಾಗುತ್ತದೆ?

3. ಸಾಲ್ಮನ್ ಮೀನುಗಳ ಸರಾಸರಿ ದೇಹ ತೂಕ ಎಷ್ಟು?

### ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸಾಲ್ಮನ್ ಮೀನುಗಳ ವಾಸನೆ ವಿಜ್ಞಾನದ ಕುರಿತು ಟಿಪ್ಪಣಿ ಬರೆಯಿರಿ.

2. ಗಂಡು ಸಾಲ್ಮನ್‌ಗಳ ಒಳಜಗಳವನ್ನು ವಿವರಿಸಿ?

# ಲೇಖನ : ನೊಬೆಲ್ ವಿಜ್ಞಾನಿ ಕ್ರೆಬ್ಸ್

ಪ್ರೊ. ಎಂ. ನಾರಾಯಣಸ್ವಾಮಿ

## ಅ. ಪದಗಳ ಅರ್ಥವನ್ನು ಓದಿ ತಿಳಿಯಿರಿ.

ಕುಸುರಿ : ಸಣ್ಣ, ಸೂಕ್ಷ್ಮ

ಸಸ್ತನಿ : ಹಾಲು ಸ್ರವಿಸುವ ಗ್ರಂಥಿಗಳಿರುವ ಪ್ರಾಣಿಗಳು

ಯಕೃತ್ತು : ಪಿತ್ತಕೋಶ, ಪಿತ್ತಜನಕಾಂಗ

ಅಬಾಧಿತ : ಬಾಧಿತವಲ್ಲದ, ತೊಂದರೆಗೊಳಗಾಗದ

## ಆ. ಒಂದು ವಾಕ್ಯದಲ್ಲಿ ಉತ್ತರಿಸಿ.

1. 'ಜೀವರಸಾಯನ ಶಾಸ್ತ್ರದ ವಿಜ್ಞಾನಿಗಳ ಆಟದ ಬಯಲು' ಯಾವುದಾಗಿತ್ತು?

2. ಇಂಗ್ಲಿಷ್ ಪಾಂಡಿತ್ಯವನ್ನು ರೂಢಿಸಿಕೊಳ್ಳಲು ಕ್ರೆಬ್ಸ್‌ರವರು ಓದಿದ ಕೃತಿಯ ಹೆಸರೇನು?

3. ಕ್ರೆಬ್ಸ್ ಸೈಕಲ್ ಸಂಶೋಧನೆಗೆ ಬಳಸಿಕೊಳ್ಳಲಾದ ಅಂಗಗಳು ಯಾವುವು?

## ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕ್ರೆಬ್ಸ್‌ರವರ ಗುರುಗಳ ಕುರಿತು ಟಿಪ್ಪಣಿ ಬರೆಯಿರಿ.

2. ಹ್ಯಾನ್ಸ್ ಕ್ರೆಬ್ಸ್‌ರವರ ಬಾಲ್ಯ ಜೀವನವನ್ನು ವಿವರಿಸಿ?

## ಲೇಖನ : ಕನ್ನಡ ಕೃಷಿ ವಿಜ್ಞಾನ ಸಾಹಿತ್ಯದ ಉಗಮ ಮತ್ತು ವಿಕಾಸ

**ಪ್ರೊ. ಜೆ. ಬಾಲಕೃಷ್ಣ**

### ಅ. ಪದಗಳ ಅರ್ಥವನ್ನು ಓದಿ ತಿಳಿಯಿರಿ.

ಕಲ್ಪವೃಕ್ಷ : ಬೇಡಿದುದನ್ನು ಕೊಡುವ ಸ್ವರ್ಗಲೋಕದ ಒಂದು ಮರ.
ಕಾಮಧೇನು : ಬಯಸಿದುದನ್ನು ಕೊಡುವ ದೇವಲೋಕದ ಹಸು.
ಚಿಂತಾಮಣಿ : ಸ್ವರ್ಗಲೋಕದ ಒಂದು ದಿವ್ಯ ರತ್ನ, ಬಯಸಿದುದನ್ನು ನೀಡುವ ಸಾಮರ್ಥ್ಯಹೊಂದಿರುವುದು.
ಪರುಷ : ತನ್ನನ್ನು ತಾಕಿದ ಇತರ ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವುದೆಂದು ಭಾವಿಸಲಾದ ಒಂದು ಶಿಲೆ.
ಕಣಿ : ಗಣಿ.
ದ್ರವ್ಯಶಕ್ತಿ : ಹಣಬಲ.
ಮೆಹನತು : ಪರಿಶ್ರಮ
ಸಾರಾಮೃತ : ವಸ್ತು ಅಥವಾ ವಿಷಯದ ತಿರುಳು.
ಹರಿಕತೆ : ಹರಿಲೀಲೆಯನ್ನು, ಹರಿಭಕ್ತಿಯನ್ನು ವಿವರಿಸುವ ಕಥೆ.
ತಿಪ್ಪೆ : ದನಗಳ ಸಗಣಿ ಮುಂತಾದ ಕಸ ಹಾಕುವ ಸ್ಥಳ.
ಪ್ರಳಾಪಿಸು : ಅಳು, ರೋಧಿಸು.
ಪ್ರಾಪಂಚಿಕೆ : ಪ್ರಪಂಚಕ್ಕೆ ಸಂಬಂಧಿಸಿದ್ದು.
ಮುಮುಕ್ಷು : ಮುಕ್ತಿಯನ್ನು ಬಯಸುವವ
ಸದಾಚಾರ : ಸನ್ನಡತೆ, ಒಳ್ಳೆಯ ನಡತೆ
ಕೈಪಿಡಿ : ವಿಷಯ ಮಾರ್ಗದರ್ಶಿ ಚಿಕ್ಕ ಪುಸ್ತಕ
ಕಾಲ್ನಡೆ : ನಾಲ್ಕು ಕಾಲುಳ್ಳ ಪ್ರಾಣಿ.
ಮುಫತ್ತು : ಉಚಿತವಾದದ್ದು.
ಅಜಮಾಯಿಷಿ : ತನಿಖೆ, ಪರೀಕ್ಷೆ.
ಚಂದಾ : ವಂತಿಗೆ ಹಣ.
ಚಾವಡಿ : ಊರ ಅಗಸೆ ಅಥವಾ ಪ್ರವೇಶದ್ವಾರ
ವೃತ್ತಾಂತ : ವಿಷಯ
ಅಸಡ್ಡೆ : ಅಲಕ್ಷ್ಯ, ಉದಾಶೀನತೆ.
ಸ್ಫುಟ : ಸ್ಪಷ್ಟ
ಸಂಕ್ರಮಣಾವಸ್ಥೆ : ಬದಲಾಗುವ ಅವಸ್ಥೆ.

### ಆ. ಒಂದು ವಾಕ್ಯದಲ್ಲಿ ಉತ್ತರಿಸಿ.

1. ಕೃಷಿ ವಿಜ್ಞಾನ ಸಾಹಿತ್ಯದ ಇತಿಹಾಸವನ್ನು ನಿರೂಪಿಸುವ ಅಧ್ಯಾಯದಲ್ಲಿ ಉಲ್ಲೇಖಿಸಿರುವಂತೆ ಮೊಟ್ಟಮೊದಲು ಪ್ರಕಟವಾದ ಪಶುವೈದ್ಯಕೀಯ ವಿಜ್ಞಾನದ ಕೃತಿಯ ವಿವರಗಳನ್ನು ಬರೆಯಿರಿ.

2. ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಕೃಷಿಶಾಲೆ ಆರಂಭಿಸಿದ ಮೈಸೂರು ಸಂಸ್ಥಾನದ ರಾಜರ ಹೆಸರೇನು?

**ಇ. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ನಾಗಭೂಷಣ ಶಿವಯೋಗಿಗಳು ಬರೆದ ಕೃಷಿಜ್ಞಾನ ಪ್ರದೀಪಿಕೆ ಪುಸ್ತಕದಲ್ಲಿ ಗೊಬ್ಬರದ ಮಹತ್ವವನ್ನು ವಿವರಿಸುವ ಸಂದರ್ಭ ಕುರಿತು ಟಿಪ್ಪಣಿ ಬರೆಯಿರಿ.

2. ಮೈಸೂರು ವ್ಯವಸಾಯ ಶೋಧಕ ಸಂಘದ ಉದ್ದೇಶಗಳು ಏನಾಗಿದ್ದವು ಎಂಬುದನ್ನು ಪಟ್ಟಿಮಾಡಿ ಬರೆಯಿರಿ.

3. ಇಪ್ಪತ್ತನೇ ಶತಮಾನದ ಮೊದಲ ಏಳು ದಶಕಗಳಲ್ಲಿ ಪ್ರಕಟವಾದ ಪಶುವೈದ್ಯಕೀಯ ಅಥವಾ ಪಶುಸಂಗೋಪನೆಯ ಕನಿಷ್ಠ ಐದು ಪುಸ್ತಕಗಳ ಹೆಸರುಗಳನ್ನು ಬರೆಯಿರಿ.

4. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು 1944 ರಿಂದ 1973ರವರೆಗೆ ಪ್ರಕಟಿಸಿರುವ ಕನಿಷ್ಠ ಐದು ಕೃಷಿ ಪ್ರಕಟಣೆಗಳ ಹೆಸರುಗಳನ್ನು ನಮೂದಿಸಿರಿ.

## ಲೇಖನ : ಕರ್ನಾಟಕದ ಪ್ರಸಿದ್ಧ ಕೃಷಿ ವಿಜ್ಞಾನಿಗಳು

**ಪ್ರೊ. ಎಂ. ನಾರಾಯಣ ಸ್ವಾಮಿ, ಪ್ರೊ. ಜಿ. ಬಾಲಕೃಷ್ಣ**

**ಅ. ಪದಗಳ ಅರ್ಥವನ್ನು ಓದಿ ತಿಳಿಯಿರಿ.**

ಫಸಲು : ಇಳುವರಿ

ಕೈಂಕರ್ಯ : ಸೇವೆ

ಪಚ್ಚೆ: ಹಸಿರು

ಗೀಳು : ಚಟ, ಖಯಾಲಿ

**ಆ. ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಅಂತ್ಯ ಸಂಸ್ಕಾರದ ವೇಳೆ ತನ್ನ ದೇಹದ ಮೇಲೆ ಒಂದು ಹಿಡಿ ರಾಗಿ ಹಾಕಿ, ಅಷ್ಟೇ ಸಾಕು ಎಂದು ನಿವೇದಿಸಿಕೊಂಡ ವಿಜ್ಞಾನಿಯ ಹೆಸರೇನು?

2. ಯೂಬ್ರೋ ಮತ್ತು ಐಬಿಬಿ –83 ಎಂಬ ಕೋಳಿ ತಳಿಗಳ ಹೆಸರುಗಳನ್ನು ವಿಸ್ತರಿಸಿ ಬರೆಯಿರಿ.

3. ಎರಡು ಬಾರಿ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ ಪಡೆದ ಕೃಷಿ ವಿಜ್ಞಾನಿಯ ಹೆಸರೇನು?

4. ಅಧಿಕ ಇಳುವರಿಯ ಹತ್ತಿ ತಳಿಗಳನ್ನು ಕೊಟ್ಟ ವಿಜ್ಞಾನಿಯ ಹೆಸರೇನು?

5. ಪೂರ್ಣಚಂದ್ರ ತೇಜಸ್ವಿಯವರು ಕರ್ವಾಲೋ ಕಾದಂಬರಿ ರಚಿಸಲು ಸ್ಪೂರ್ತಿಯಾದ ಕೃಷಿ ವಿಜ್ಞಾನಿಯ ಹೆಸರೇನು?

6. ಮೀನು ಸಾಕಣೆಯ ರೈತರು ನೀರಿನಲ್ಲಿ ವೈರಸ್ ಪತ್ತೆ ಹಚ್ಚುವ ಪರೀಕ್ಷೆ ಮಾಡಿಕೊಳ್ಳಲು ಕಿಟ್ ಒಂದನ್ನು ರೂಪಿಸಿಕೊಟ್ಟ ವಿಜ್ಞಾನಿಯ ಹೆಸರೇನು?

# ಚಟುವಟಿಕೆಗಳು

## 1. ಕನ್ನಡ ಸಂವಹನದ ಲಘು ಪ್ರಹಸನ

ಬೋಧಕರು ವಿದ್ಯಾರ್ಥಿಗಳಿಂದ ಪಶು ಸಾಕಾಣಿಕೆ ಕುರಿತಾದ ಕನ್ನಡದಲ್ಲಿ ಒಂದು ಲಘು ಪ್ರಹಸನವನ್ನು ಬರೆಯಿಸಿ, ವಿದ್ಯಾರ್ಥಿಗಳು ತಾಲೀಮು ಮಾಡಿಕೊಂಡು ಅಭಿನಯಿಸುವಂತೆ ಮಾಡುವುದು. ಲಘು ಪ್ರಹಸನದ ಸಂಭಾಷಣೆಯನ್ನು ವಿದ್ಯಾರ್ಥಿಗಳು ಕನಿಷ್ಟ ಎರಡು ಪುಟಗಳಷ್ಟು ಬರೆಯುವುದು.

## 2. ಪ್ರಬಂಧ ರಚನೆ

ಪಠ್ಯಪುಸ್ತಕದಲ್ಲಿ ಹಲವು ಪ್ರಬಂಧಗಳನ್ನು ಕೊಡಲಾಗಿದೆ. ಆದರಂತೆ, ಬೋಧಕರು ಪ್ರಬಂಧ ರಚನೆಗೆ ಪಶು ಸಾಕಾಣಿಕೆಯ ಯಾವುದಾದರೂ ಒಂದು ವಿಷಯವನ್ನು ಸೂಚಿಸುವುದು. ವಿದ್ಯಾರ್ಥಿಗಳು ಈ ಪ್ರಾಯೋಗಿಕ ಕೈಪಿಡಿಯಲ್ಲಿ ೨೦೦ ಪದಗಳ ಆಸುಪಾಸಿನಲ್ಲಿರುವಂತೆ ಸ್ವಂತ ಹಸ್ತಾಕ್ಷರದಲ್ಲಿ ಪ್ರಬಂಧ ಬರೆಯುವುದು.

## 3. ಕನ್ನಡದಲ್ಲಿ ಪತ್ರ ಬರವಣಿಗೆ

ಪಶುವೈದ್ಯಕೀಯ ವಿದ್ಯಾರ್ಥಿಗಳು ಪದವೀಧರರಾದ ನಂತರ ವೃತ್ತಿನಿರತರಾದಾಗ ಅವರವರ ವಿಷಯಗಳಲ್ಲಿ ವ್ಯವಹರಿಸುವಾಗ ಕನ್ನಡದಲ್ಲಿ ಹೇಗೆ ಪತ್ರ ಬರವಣಿಗೆಯನ್ನು ಕೈಗೊಳ್ಳಬೇಕು ಎಂಬುದನ್ನು ಕಲಿಸಿಕೊಡುವುದು. ತಮ್ಮ ಮೇಲಾಧಿಕಾರಿಗಳಿಗೆ ಬರೆಯಬಹುದಾದ ಎರಡು ಮಾದರಿ ಪತ್ರಗಳ ಬರವಣಿಗೆಯನ್ನು ಈ ಪ್ರಾಯೋಗಿಕ ಕೈಪಿಡಿಯಲ್ಲಿ ಬರೆಸುವುದು.

**4.ಪಶುವೈದ್ಯಕೀಯ ಹಾಗೂ ಪಶುಸಂಗೋಪನೆಯ ಪಾರಿಭಾಷಿಕ ಪದಕೋಶ**

ಸಾಂಸ್ಕೃತಿಕ ಕನ್ನಡ ಪಠ್ಯಪುಸ್ತಕದಲ್ಲಿ ಪಶುವೈದ್ಯಕೀಯ ಹಾಗೂ ಪಶುಸಂಗೋಪನೆಯ ಹಲವು ವಿಷಯಗಳ ಪಾರಿಭಾಷಿಕ ಪದಕೋಶವನ್ನು ಪ್ರಾತಿನಿಧಿಕವಾಗಿ ಕೊಡಲಾಗಿದೆ. ಅಲ್ಲಿ ಕೊಡದಿರುವ ಕನಿಷ್ಟ 20 ಪದಗಳ ಆಂಗ್ಲಭಾಷೆ : ಕನ್ನಡ ಪದಗಳ ಪದಕೋಶವನ್ನು ಪ್ರತಿ ವಿದ್ಯಾರ್ಥಿಯಿಂದ ಆಯ್ಕೆ ಮಾಡಿಸಿ ಬರೆಸಬೇಕು.

1. ______________________________
2. ______________________________
3. ______________________________
4. ______________________________
5. ______________________________
6. ______________________________
7. ______________________________
8. ______________________________
9. ______________________________
10. ______________________________
11. ______________________________
12. ______________________________
13. ______________________________
14. ______________________________
15. ______________________________
16. ______________________________
17. ______________________________
18. ______________________________
19. ______________________________
20. ______________________________